ಅರಣ್ಯ ಇಲಾಖೆಯ ಜಮೀನನ್ನು ಕೃಷಿ ಚಟುವಟಿಕೆಗೆ ಗುತ್ತಿಗೆ ನೀಡಿರುವ ಬಗ್ಗೆ.

2220(2723) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಅರಣ್ಯ ಭೂಮಿಯನ್ನು ಕೃಷಿ ಚಟುವಟಿಕೆಗಾಗಿ ಗುತ್ತಿಗೆ ನೀಡುತ್ತಿರುವುದು ನಿಜವೇ? ಎವರ ನೀಡುವುದು. ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಗುತ್ತಿಗೆ ನೀಡಲಾಗುವುದು?

ಆ) ಇಲ್ಲಿಯವರೆಗೆ ಎಷ್ಟು ಅರಣ್ಯ ಭೂಮಿಯನ್ನು ಈ ಉದ್ದೇಶಕ್ಕಾಗಿ ಗುತ್ತಿಗೆ ನೀಡಲಾಗಿದೆ? ಜಿಲ್ಲಾವಾರು ಮಾಹಿತಿ ನೀಡುವುದು.

ಇ) ಗುತ್ತಿಗೆ ನೀಡಿದ ಸಂದರ್ಭದಲ್ಲಿ ಒಂದು ಎಕರೆಗೆ ಎಷ್ಟು ಹಣವನ್ನು ಗುತ್ತಿಗೆ ದರ ಎಂದು ವಿಧಿಸಲಾಗುವುದು?

ಈ) ಕಳೆದ ವರ್ಷಗಳಲ್ಲಿ ಈ ರೀತಿ ಅರಣ್ಯ ಇಲಾಖೆ ವಸೂಲಿ ಮಾಡಿದ ಹಣದ ಮೊತ್ತ ಎಷ್ಟು?

ಉ) ಕಳೆದ ಹಲವಾರು ವರ್ಷಗಳಿಂದ ಅರಣ್ಯ ಇಲಾಖೆ ಗುತ್ತಿಗೆ ಹಣವನ್ನು ವಸೂಲಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ವಸೂಲಿ ಮಾಡದಿರಲು ಕಾರಣವೇನು?

ಊ) ವಸೂಲಿ ಮಾಡದೆ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) ಅರಣ್ಯ ಪರಿಸರ ಕಾಯ್ದೆ1980 ದಿನಾಂಕ 25-10-1980 ರಂದು ಜಾರಿಗೆ ಬಂದಿರುತ್ತದೆ. ಈ ಕಾಯ್ದೆಯ ಪ್ರಕಾರ ಯಾವುದೇ ಅರಣ್ಯ ಭೂಮಿಯನ್ನು ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆಯದೇ ಅರಣ್ಯೇತರ ಉದ್ದೇಶಕ್ಕಾಗಿ ಬಿಡುಗಡೆಗೊಳ್ಳುವಂತಿಲ್ಲ. 1980ರ ನಂತರ ಯಾವವುದೇ ಅರಣ್ಯ ಭೂಮಿಯನ್ನು ಕೃಷಿ ಚಟುವಟಿಕೆಗಾಗಿ ಗುತ್ತಿಗೆ ಮೇಲೆ ನೀಡಿರುವುದಿಲ್ಲ.

ಆ) ಅರಣ್ಯ ಸಂರಕ್ಷಣಾ ಕಾಯ್ದೆ 1980 ಜಾರಿಗೆ ಬರುವ ಮುನ್ನ ಈ ಹಿಂದೆ ಅಂದರೆ 1922 ರಿಂದ 1980 ರ ವರೆಗೆ ವಿವಿಧ ಭಾಗಗಳಲ್ಲಿ ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಯಿಂದ ಕರಾರು ಮಾಡಿಕೊಂಡು ಕೃಷಿಗಾಗಿ ಹಂಗಾಮಿ ಲಗಾನ್ ಲೀಸ್ (ಎಕಸಾಲಿ) ಆಧಾರದ ಮೇಲೆ ಅರಣ್ಯ ಭೂಮಿಯನ್ನು ಗೇಣಿ ನೆಲೆಯಲ್ಲಿ ಬಿಡುಗಡೆ ಮಾಡಲಾದ ಬಗ್ಗೆ ಮಾಹಿತಿಯ ಅರಣ್ಯ ವಿಭಾಗವಾರು ಪಟ್ಟಿಯನ್ನು ಲಗತ್ತಿಸಿದೆ. 1908

ರಿಂದ 1917ರ ವರೆಗೂ ಕೊಡಗು ಜಿಲ್ಲೆಯಲ್ಲಿ ಮೀಸಲು ಅರಣ್ಯ ಪ್ರದೇಶದಲ್ಲಿ ರಬ್ಬರ್ ಕೃಷಿಗಾಗಿ 3691.76 ಎಕರೆ ಪ್ರದೇಶವನ್ನು ಗೇಣಿ ಆಧಾರದ ಮೇಲೆ ಕೊಡಲಾಗಿದೆ.

ಇ) ಹಂಗಾಮಿ ಲಗಾನ್ ಲೀಸ್ ಆಧಾರದ ಮೇಲೆ ಕೃಷಿಗಾಗಿ ಬಿಡುಗಡೆ ಮಾಡಲಾದ ಅರಣ್ಯ ಭೂಮಿಯ ಗೇಣಿ ದರವು ಪ್ರತಿ ಎಕರೆಗೆ ರೂ. 1-50 ರಿಂದ 10-00 ರವರೆಗೆ ನಿಗಧಿಪಡಿಸಲಾಗಿದ್ದು, ಇದನ್ನು ಸರ್ಕಾರದ ಪತ್ರ ಸಂ. ಎಎಫ್‌ಡಿ 327 ಎಫ್‌ಜಿಎಲ್ 72, ದಿನಾಂಕ: 5-7-74ರಲ್ಲಿ ಸದರಿ ಲೀಸ್‌ಗಳನ್ನು 4 ಗುಂಪುಗಳನ್ನಾಗಿ ವಿಂಗಡಿಸಿ ಅದರಂತೆ ಗುಂಪು 3ನ್ನು ಹಳೆಯ ದರದಲ್ಲಿಯೂ ಮತ್ತು 1, 2, 4ಕ್ಕೆ ಪ್ರತಿ ವರ್ಷಕ್ಕೆ ರೂ.250 ರಂತೆ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಗೇಣಿ ಆಧಾರದ ಮೇಲೆ ರಬ್ಬರ್ ಕೃಷಿ ಮಾಡಲು ಮೊದಲು ಎರಡು ವರ್ಷಗಳ ಕಾಲ ಗೇಣಿ ಬಾಡಿಗೆಯನ್ನು ವಿಧಿಸದೆ ತದನಂತರ ವರ್ಷಕ್ಕೆ ಪ್ರತಿ ಎಕರೆಗೆ ರೂ.3-00 ಹಣವನ್ನು ಕೊಡಲು ಕಂದಾಯ ಇಲಾಖೆಯವರು ಕರಾರು ಮಾಡಿಕೊಂಡಿರುವರು.

ಈ) ಏಕಸಾಲಿಗೆ ಸಂಬಂಧಪಟ್ಟಂತೆ ರೂ. 20, 68,598-00 ಗಳನ್ನು ವಸೂಲಿ ಮಾಡಲಾಗಿದೆ.

ರಬ್ಬರಿಗೆ ಸಂಬಂಧಿಸಿದಂತೆ ಒಟ್ಟು ರೂ. 1,64,59, 1,42,85 ಗಳನ್ನು ಸಂಸ್ಥೆಗಳಿಂದ ವಸೂಲಿ ಮಾಡಬೇಕಾಗಿದ್ದು, ಇದರ ಬಗ್ಗೆ ಇಲಾಖಾವತಿಯಿಂದ ಕ್ರಮ ಕೈಗೊಂಡಾಗ ಈ ಕ್ರಮವನ್ನು ಪ್ರಶ್ನಿಸಿ ರಬ್ಬರ್ ಕಂಪನಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಚಲಾಯಿಸಿ ತಡೆಯಾಜ್ಞೆಯನ್ನು ತಂದಿರುತ್ತಾರೆ. ಇದರ ಬಗ್ಗೆ ಸರ್ಕಾರದ ವತಿಯಿಂದ ತಡೆಯಾಜ್ಞೆಯನ್ನು ತೆರವುಗೊಳಿಸಲು ಮೇಲ್ಮನವಿಯನ್ನು ಸಲ್ಲಿಸಲಾಗಿದೆ. ನ್ಯಾಯಾಲಯದ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗಿದೆ.

ಉ) 1922ನೇ ಅವದಿಯಿಂದ ರೂ.22,68,598.00 ಗಳನ್ನು ಏಕಸಾಲಿ ಗೇಣಿಗೆ ಸಂಬಂಧಪಟ್ಟಂತೆ ಹಳೆಯ ದರದಲ್ಲಿ ವಸೂಲಿ ಮಾಡಲಾಗಿದೆ. ಆದರೆ ಸರ್ಕಾರದ ಪತ್ರ ಸಂ. ಎಎಫ್‌ಡಿ 327 ಎಫ್‌ಜಿಎಲ್ 72, ದಿನಾಂಕ: 5-7-74ರಂತೆ ಪರಿಷ್ಕೃತ ಹೆಚ್ಚುವರಿ ಗೇಣಿ ದರವನ್ನು ಎಲ್ಲಾ ಗೇಣಿದಾರರಿಂದ ವಸೂಲಿ ಮಾಡಲು ಸಾಧ್ಯವಾಗಲಿಲ್ಲ. ಏಕೆಂದರೆ ಹಲವರು ಹೆಚ್ಚುವರಿ ಗೇಣಿ ದರವನ್ನು ಪಾವತಿ ಮಾಡಲು ಒಪ್ಪಿರುವುದಿಲ್ಲ. ಎಲ್ಲಾ ಗೇಣಿದಾರರಿಂದ ಹೆಚ್ಚುವರು ದರದಂತೆ ಗೇಣಿ ಬಾಡಿಗೆಯನ್ನು ವಸೂಲಿ ಮಾಡಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ರಬ್ಬರ್ ಕೃಷಿಗಾಗಿ ಗೇಣಿ ಆಧಾರದ ಮೇಲೆ ನೀಡಲಾಗಿರುವ ಭೂಮಿಗೆ ಗೇಣಿ ಬಾಡಿಗೆಯನ್ನು ವಸೂಲು ಮಾಡದಿರುವ ಬಗ್ಗೆ ಮೇಲೆ (ಈ) ಭಾಗದಲ್ಲಿ ಉತ್ತರವನ್ನು ನೀಡಲಾಗಿದೆ.

ಊ) ಕ್ರಮ ಕೈಗೊಂಡಿರುವುದಿಲ್ಲ.

ವಿಧಾನ ಸಭಾ ಪ್ರಶ್ನೆ ಸಂಖ್ಯೆ 2723ರ ಅನೆಕ್ಸರ್

ಗೇಣಿಗೆ ನೀಡಲಾದ ಅರಣ್ಯ ಭೂಮಿಯ ಪಟ್ಟಿ (ವಿಭಾಗವಾರು ವಿವರ)

ಕ್ರಮ ಸಂಖ್ಯೆ	ಅರಣ್ಯ ವಿಭಾಗ ಹೆಸರು	ಹಂಗಾಮಿ ಲಾಗನ್ ಗೇಣಿ (ಎಕಸಾಲಿ) (ಪ್ರದೇಶ ಎಕರೆಗಳಲ್ಲಿ)	ರಬ್ಬರ್ ಕೃಷಿಗಾಗಿ ಗೇಣಿಗೆ ನೀಡಲಾದ ಅರಣ್ಯ ಪ್ರದೇಶದ ವಿಸ್ತೀರ್ಣ (ಎಕರೆಗಳಲ್ಲಿ)
1.	ಹಳಿಯಾಳ	1229.10	
2.	ಯಲ್ಲಾಪುರ	2974.13	
3.	ಹೊನ್ನಾವರ	3272.00	
4.	ಕಾರವಾರ	1953.50	
5.	ಸಿರ್ಸಿ	2231.12	
6.	ಬೆಳಗಾಂ	1874.511	
7.	ಗೋಕಾಕ್	637.118	
8.	ಧಾರವಾಡ	28.826	
9.	ಹಾವೇರಿ	135.617	
10.	ಬಾಗಲಕೋಟೆ	1289.638	
11.	ಗದಗ್	352.181	
12.	ಬಿಜಾಪುರ	10.522	
13.	ಹಾಸನ	-	
14.	ತುಮಕೂರು	40.01	
15.	ಮಡಿಕೇರಿ	40.80	2403.00
16.	ವೀರಾಜಪೇಟೆ	-	1288.75
17.	ಮಂಗಳೂರು	3.00	-
	ಒಟ್ಟು	22564.165	3691.75

ಉಡುಪಿಯಲ್ಲಿ ಜಿಲ್ಲಾ ನ್ಯಾಯಾಲಯವನ್ನು ಪ್ರಾರಂಭಿಸುವುದು.

2222(1837) ಶ್ರೀ ಜಯಪ್ರಕಾಶ್ ಹೆಗ್ಗಡೆ ಕೆ. (ಬ್ರಹ್ಮಾವರ) :— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.